ಇ. ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು?

ಶ್ರೀ.ಡಿ.ಕೆ.ಶಿವಕುಮಾರ್(ನಗಾರಾಭಿವೃದ್ದಿ ಸಚಿವರು)

ಉ. ಹೌದು

ಊ. ಪೌರ ಕಾರ್ಮಿಕರನ್ನು ನೇಮಿಸುವ ಕ್ರಮ ಇರುವುದಿಲ್ಲ. ಆದರೆ ಸ್ವಚ್ಚತಾ ಕಾರ್ಯವನ್ನು ಕಾಂಟ್ರಾಕ್ಟ್ ಮೂಲಕ ನಿರ್ವಹಿಸಲು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ಅಧಿಕಾರ ಹೊಂದಿರುತ್ತದೆ.

ಋ. ಪೌರ ಕಾರ್ಮಿಕರ ಕೊರತೆ ಇರುವ ನಗರ ಸ್ಥಳೀಯ ಸಂಸ್ಥೆಗಳು ಸ್ವಚ್ಚತಾ ಕಾರ್ಯವನ್ನು ಟೆಂಡರ್ ಕರೆದು ಕಾಂಟ್ರಾಕ್ಟ ಮೂಲಕ ನಿರ್ವಹಿಸುವುದು.

ಘಟಪ್ರಭದಿಂದ ಹುಬ್ಬಳಿಗೆ ಹೊಸ ರೈಲು ಮಾರ್ಗ

153(282) ಶ್ರೀ ಮನೋಹರ ಮನ್ನಪ್ಪ ಕಡೋಲ್ಕರ್ (ಉಚ್ಚಗಾಂವ್) : ಮಾನ್ಯ ಮೂಲಸೌಲಭ್ಯ ಅಭಿವೃದ್ದಿ ಹಾಗೂ ನಾಗರೀಕ ವಿಮಾನಯಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಉ. (ಸವದತ್ತಿ ತಾಲ್ಲೂಕು ಯಲ್ಲಮ್ಮ ದೇವಸ್ಥಾನದ ಮೂಲಕ) ಘಟಪ್ರಭದಿಂದ ಹುಬ್ಬಳಿಗೆ ಹೊಸ ರೈಲು ಮಾರ್ಗವು ಮಹಾರಾಷ್ಟ್ರದ ತೀರ್ಥಯಾತ್ರಿಗಳಿಗೆ ಗೋಕಾಕ್, ಸವದತ್ತಿ ಮತ್ತು ಬೈಲಹೊಂಗಲ ತಾಲ್ಲೂಕಿಗಳಿಗೆ ಪ್ರಯಾಣದೂರವನ್ನು ಬಾಂಬೆಯಿಂದ 80 ಕಿ.ಮೀಗಳನ್ನು ತಗ್ಗಿಸುವುದರಿಂದ ಉಪಯೋಗಕರವಾಗುವುದು ನಿಜವಲ್ಲವೇ ಹಾಗಿದ್ದಲ್ಲಿ ಸರ್ಕಾರವು ಭಾರತ ಸರ್ಕಾರದ ರೈಲ್ವೆ ಮಂತ್ರಾಲಯಕ್ಕೆ ಪ್ರಸ್ತಾವನೆ ಸಲ್ಲಿಸುವುದು?

ಶ್ರೀ .ಟಿ. ಜಾನ್ (ಮೂಲ ಸೌಲಭ್ಯ ಅಭಿವೃದ್ದಿ ಹಾಗೂ ನಾಗರೀಕ ವಿಮಾನಯಾನ ರಾಜ್ಯ ಸಚಿವರು)

ಉ. ಘಟಪ್ರಭಾವದಿಂದ ಹುಬ್ಬಳ್ಳಿಗೆ(ಸವದತ್ತಿ ಮಾರ್ಗವಾಗಿ) ಹೊಸ ರೈಲು ಮಾರ್ಗವನ್ನು ಪ್ರಾರಂಭಿಸುವ ಪ್ರಸ್ತಾಪನೆ ಸದ್ಯಕ್ಕೆ ಇರುವುದಿಲ್ಲ.

ಬೆಳಗಾವಿ ಕೇಂದ್ರ ಕಾರಾಗೃಹದಲ್ಲಿ ಅನುದಾನ ಕೊರತೆ

154(283) ಶ್ರೀ ಮನೋಹರ್ ಪುನ್ನಪ್ಪ ಕಾಡೋಲ್ಕರ್ (ಉಚ್ಚಗಾಂವ್) : ಮಾನ್ಯ ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಉ. ಬೆಳಗಾವಿ ಕೇಂದ್ರ ಕಾರಾಗೃಹದಲ್ಲಿ ಅನುದಾನ ಕೊರತೆಯಿಂದಾಗಿ ಪೂರ್ಣ ಅಭಿವೃದ್ದಿ ಹಾಗೂ ನಿರ್ವಹಣೆ ಕಾಮಗಾರಿಗಳು ಸ್ಥಗಿತಗೊಂಡಿರುವುದು ಹಾಗೂ ಕಾರಾಗೃಹದ ಒಳಾಂಗಣ ರಸ್ತೆ ಹಾಗೂ ಕಟ್ಟಡಗಳು ಶಿಥಿಲ ಗೊಂಡಿರುವುದನ್ನು ಸರ್ಕಾರ ಗಮನಿಸಿದೆಯೇ?

ಊ. ಹಾಗಿದ್ದಲ್ಲಿ, ಹೆಚ್ಚುವರಿ ಅನುದಾನ ಒದಗಿಸಲು ಕೈಗೊಂಡ ಕ್ರಮಗಳೇನು?

ಋ. ಜೈಲಿನ ವಿವಿಧ ಮೂಲಗಳಿಂದ ಬರುವ ಆದಾಯವನ್ನು ಜೈಲಿಗಾಗಿಯೇ ಬಳಸುವ ಪ್ರಸ್ತಾವನೆ ಸರ್ಕಾರ ಪರಿಶೀಲಿಸುವುದೇ? ಹಾಗೂ ಜೈಲಿನಲ್ಲಿ ಹೆಚ್ಚು ಉದ್ಯೋಗ ಒದಗಿಸುವ ಮತ್ತು ಹೆಚ್ಚು ಆದಾಯ ತರುವ ಯೋಜನೆ ಅನುಷ್ಠಾನಗೊಳಿಸುವುದೇ?

ಶ್ರೀ ರಾಜ ಅಮರೇಶ್ವರ ನಾಯಕ್(ಬಂದೀಖಾನೆ ಸಚಿವರು)

ಉ. ಗಮನಿಸಿದೆ.

ಅ. ರೂ.4.00 ಲಕ್ಷಗಳ ಅಂದಾಜಿನ ವೆಚ್ಚದಲ್ಲಿ ಕಾರಾಗೃಹದಿಂದ ಒಳಾಂಗಣದ ರಸ್ತೆ ಅಭಿವೃದ್ಧಿಯ ಕಾಮಗಾರಿ ಪ್ರಗತಿಯಲ್ಲಿದೆ.

ಇ. ಇಲ್ಲ. ಅಂತಹ ಪ್ರಸ್ತಾಪನೆ ಬಂದಲ್ಲಿ ಅದನ್ನು ಪರಿಶೀಲಿಸಲಾಗುವುದು.

ರಾಜ್ಯದಲ್ಲಿ ವಿದ್ಯುತ್ ಕೊರತೆ

155 (284) ಶ್ರೀ ಮನೋಹರ ಪುನ್ನಪ್ಪ ಕಾಡೋಲ್ಕಾರ(ಉಚ್ಚಾಗಾಂವ್) : ಮಾನ್ಯ ಇಂಧನ ರಾಜ್ಯ ಸಚಿವರು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಸಾಧ್ಯವಾದಷ್ಟು ನೀರು ಲಭ್ಯವಿದ್ದರೂ ವಿದ್ಯುತ್ ಕೊರತೆಯಿಂದಾಗಿ ರೈತರ ಬೆಳೆಗಳು ನಾಶವಾಗುತ್ತಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಹಾಗಿದ್ದಲ್ಲಿ, ವಿದ್ಯುತ್ ಕೊರತೆಯಂತಹ ಜ್ವಲಂತ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ. 2002-03ರಲ್ಲಿ ಸಾಲಿನಲ್ಲಿ ಮಳೆಯತೀವ್ರ ಅಭಾವದ ಕಾರಣ ಹಾಗೂ ಜಲವಿದ್ಯುತ್ ಉತ್ಪಾದನೆಯು ತಗ್ಗಿರುವ ಹಿನ್ನಲೆಯಲ್ಲಿ ರಾಜ್ಯದಲ್ಲಿ ವಿದ್ಯುತ್ ಅಭಾವವು ತಲೆದೋರಿದೆ. ಪ್ರಸ್ತುತ 35084 ಮಿಲಿಯನ್ ಯೂನಟ್‌ಗಳಷ್ಟು ವಿದ್ಯುತ್ ಬೇಡಿಕೆಯಿದ್ದು. ಕೇವಲ 29404 ಮಿಲಿಯನ್ ಯೂನಿಟ್ ಪ್ರಸಕ್ತ ಸಾಲಿನಲ್ಲಿ 5680 ಮೀ. ಯೂನಿಟ್‌ಗಳ ವಿದ್ಯುತ್ ಕೊರತೆಯನ್ನು ಅನುಭವಿಸುತ್ತಿದೆ. ಆದ್ದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಲೋಡ್ ಶೆಡ್ಡಿಂಗ್ ಜಾರಿಗೆ ತರುವುದು ಅನಿವಾರ್ಯವಾಗಿದೆ.

ಆ. ಪ್ರಸ್ತುತ ವಿತರಿಸಲಾಗುತ್ತಿರುವ ವಿದ್ಯುತ್ ಪ್ರಮಾಣವನ್ನು ಬೇಸಿಗೆಯಲ್ಲಿ ಸಹ ಮುಂದುವರಿಸಲು ಸರ್ಕಾರವು ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತಿದೆ. ಆರ್‌ಟಿಪಿಎಸ್ 7ನೇ ಘಟಕ, ಎನ್‌ಟಿಪಿಸಿ ಆಶ್ರಯದಲ್ಲಿ, ತಾಲ್ಚರ್‌ನಲ್ಲಿ 500 ಮೆ.ವ್ಯಾ ಸಾಮಥ್ಯದ ಸ್ಥಾವರ ಹಾಗೂ ಮೆ: ವ್ಯಾ ಸ್ಥಾವರ ಸ್ಥಾಪನೆ ಹಾಗು ಮೆ : ಎನ್‌ಎಲ್‌ಸಿಯವರಿಂದ 210 ಮೆ,ವ್ಯಾ,ಸಾಮರ್ಥ್ಯದ ಸ್ಥಾವರ ಸ್ಥಾಪನೆಯಿಂದಾಗಿ ವಿದ್ಯುತ್ ಲಭ್ಯತೆಯ ಪ್ರಮಾಣದಲ್ಲಿ ಸ್ವಲ್ಪಮಟ್ಟಿನ ಏರಿಕೆ ಕಂಡುಬಂದಿದೆ. ಆದ್ದರಿಂದ ಫೆಬ್ರವರಿಯಿಂದ ಮೇ 2003 ರವರೆಗೆ ಬೇಸಿಗೆಯಲ್ಲಿ ವಿದ್ಯುತ್ ಕೊರತೆ ನೀಗಿಸುವಲ್ಲಿ ಬಹಳ ಸಹಾಯವಾಗುತ್ತದೆ. ದೀರ್ಘಾವಾದಿ ಯೋಜನೆಯಡಿಯಲ್ಲಿ ಕೆಪಿಸಿಟಿಎಲ್ ಆಶ್ರಯದಲ್ಲಿ ಈ ಕೆಳಕಂಡ ಯೋಜನೆಗಳನ್ನು ಕೈಗೊಳ್ಳಲಾಗುತ್ತದೆ.

1.	ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಸ್ಥಾವರ	500	ಮೆ.ವ್ಯಾ
2.	ಆಲಮಟ್ಟಿ ಜಲವಿದ್ಯುತ್ ಯೋಜನೆ	290	〃
3.	ಆರ್‌ಟಿಪಿಎಸ್ ಹಂತ 8ನೇ ಘಟಕ	210	〃
4.	ಮಹಾದಾಯಿ ಜಲವಿದ್ಯುತ್ ಯೋಜನೆ	320	〃
5.	ಬಡದಿ ಸಂಯುಕ್ತ ಆವರ್ತನ ವಿದ್ಯುತ್ ಸ್ಥಾವರ	700	〃

ಇದಲ್ಲದೆ ಕೆಳಕಂಡ ಕೇಂದ್ರ ವಿದ್ಯುತ್ ಸ್ಥಾವರಗಳಿಂದ ಗಣನೀಯ ಪ್ರಮಾಣದಲ್ಲಿ ವಿದ್ಯುತ್ ಪಡೆಯುವ ನೀರಿಕ್ಷೆಯಿದೆ.